Kanakadāsa

Bhakti-sāravu

1871

KANAKA DASANA

BHAKTI SARAVU.

ಕನಕದಾಸನ ಭಕ್ತಿಸಾರವು.

ಕ್ರಯ ಎರಡೂವರೆ ಅಣೆ.

BHAKTI SĀRAVU

BEING

A STRING OF HYMNS

BY

KANAKA DĀSA.

:o:

ಕನಕದಾಸನ ಭಕ್ತಿಸಾರವು.

ನವೀನ ಛಾಪೆ

MANGALORE

PRINTED BY K. VENKATARAU AT THE HINDU PRESS,

1871

A
MEMOIR OF KANAKA DASA.

ಕನಕದಾಸನ ವೃತ್ತಾಂತವು.

———:o:———

ಈ ಭಕ್ತಿಸಾರವೆಂಬ ಮಹಾ ಕವಿತ್ವವನ್ನು ರಚಿಸಿದ ಕನಕದಾಸನು ಸುಮಾರು ೩೦೦ ವರ್ಷಗಳ ಹಿಂದೆ, ಧಾರವಾಡ ಜಿಲ್ಲೆಯ ಬಾಡವೆಂಬ ಗ್ರಾಮದಲ್ಲಿ ಜೀವಿಸುತ್ತಿದ್ದನು. ಅವನು ಹುಟ್ಟುಬೇಡನಾದದರಿಂದ, ದೇವರು ಅವನಿಂದ ಆ ಕ್ರೂರ ಕೆಲಸಗಳನ್ನು ಬಿಡಿಸಬೇಕೆಂದು, ಒಮ್ಮೆ ಅಲ್ಲಿ ಆದ ಯುದ್ಧದ ಹೊತ್ತರಲ್ಲಿ, ರಾಹುತನ ರೀತಿಯಿಂದ ಬಂದು ಅವನಿಗೆ ಹೊಡೆದು ಮೈಗೆಲ್ಲಾ ಘಾಯ ಮಾಡಿದನು. ಆಗಲಾ ಕನಕನು ದೈನ್ಯಪಟ್ಟು, ದೇವರ ಕೃಪೆ ಪಡಕೊಳ್ಳಬೇಕೆಂತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಸರುಗೊಂಡ ಉಡುಪಿ ಕೃಷ್ಣನ ಮಠದೊಳಗೆ ಹೋಗಲಾಗಿ, ವಾಡಿಕೆ ಪ್ರಕಾರ ಅಲ್ಲೇ ಹಾರುವರು ಅವನನ್ನು ಹೀನ ಜಾತಿಯವನೆಂಬದರಿಂದ ಹೊರಗೆ ತಳ್ಳಿದರು. ಆಗ ಸಹಾಯಹೀನನಾಗಿ ಅವನು ದೇವಸ್ಥಾನದ ಪ್ರಾಕಾರದ ಹೊರಗೆ ಹಿಂದಗಡೆಯಲ್ಲಿ ನಿಂತು ಅಷ್ಟೋತ್ತರಶತಕವಾದ ಭಕ್ತಿಸಾರದ ಗೀತಗಳನ್ನು ಹಾಡಲಾಗಿ ಕೃಷ್ಣನು ಮೆಚ್ಚಿ ಮುಖವನ್ನು ಅಂದಿನಿಂದ ಶಾಶ್ವತವಾಗಿ ಕನಕನು ನಿಂತ ಕಡೆಗೆ ತಿರುಗಿಸಿ ನಿಂತದ್ದಲ್ಲದೆ, ಅವನಿಗೆ ಪ್ರಸನ್ನನಾಗಿ ತನ್ನ ದಿವ್ಯ ಹಸ್ತದಿಂದ ಅವನ ಮೈಮುಟ್ಟಲು, ಘಾಯಗಳು ಮಾದು, ಸ್ವರ್ಣಮಯಕಾಯನಾದನು. ಆಗ ಕಳ್ಳರ ದೆಸೆಯಿಂದ ಪ್ರಾಣ

ವು ಸುರಕ್ಷಿತವಾಗಿರದೆಂದು ಕನಕನು ಹೆದರಿ ಹೇಳಿ ಕೊಳ್ಳಲಾಗಿ, ಹಣೆಯ ಮೇಲೆ ಒಂದು ನಾಮವನ್ನು ಮಾತ್ರ ಇರಿಸಿದನು. ಇದು ನಡದ ಪುಣ್ಯ ಭೂಮಿಯಲ್ಲಿ ಈಗಲೂ ಒಂದು ಶಿಲಾಮಂಟಪವಿದೆ ಇದೆಲ್ಲವನ್ನು ತಿಳಿದಂಥಾ ಮಾಧ್ವರಾದ ವಾದಿರಾಜಸ್ವಾಮಿಗಳು ಕನಕನನ್ನು ಸನ್ಮಾನದಿಂದ ನಡಿಸುತ್ತಿದ್ದು ಒಮ್ಮೆ ಸಮಾರಾಧನೆ ದಿವಸ ಬ್ರಹ್ಮಣಾರ್ಯರಿಗೂ ತೀರ್ಥ ಕೊಡುವದಕ್ಕೆ ಮುಂಚೆ ಈ ಕನಕನಿಗೆ ತೀರ್ಥ ಕೊಟ್ಟರು. ಅದಕ್ಕೆ ಬ್ರಾಹ್ಮಣರು ಆಕ್ಷೇಪಿಸಲಾಗಿ ಸ್ವಾಮಿಗಳು ಗರ್ಭಗೃಹದಿಂದ ಒಂದು ಸಾಲಿಗ್ರಾಮವನ್ನು ಮುಷ್ಟಿಯಲ್ಲಿ ಹಿಡಿಕೊಂಡು ಬಂದು ಅದೇನೆಂದು ಪ್ರಶ್ನೆ ಮಾಡಲು, ಬ್ರಾಹ್ಮಣರೆಲ್ಲರು ಸರಿಯಾಗಿ ಉತ್ತರ ಕೊಡದೆ ಇದ್ದರು. ಆಗ ಕನಕನು:

"ಈತನೀಗ ವಾಸುದೇವನು—ಗೋಪಾಲಕೃಷ್ಣ
ಈತನೀಗ ವಾಸುದೇವನು,

ಎಂಬ ಪದ ಹೇಳಿ ಉದಹರಿಸಿದನು. ಈ ಭಕ್ತನು ಇದೇ ಪ್ರಕಾರ ಬಹು ಕಾಲ ಉತ್ತಮವಾದ ಪದ್ಯಗಳನ್ನು ಹಾಡುತ್ತಾ ಊರೂರು ತಿರುಗಾಡುತ್ತಾ ಇದ್ದು, ಕಡೆಗೆ ಧಾರವಾಡ ಜಿಲ್ಲೆಯಲ್ಲಿರುವ ಕಾಗಿನೆಲೆಯಾದಿ ಕೇಶವನ ಗುಡಿಯಲ್ಲಿ ಮರಣಪಟ್ಟನು.

———:o:———

ಕನಕದಾಸನ ಭಕ್ತಿಸಾರವು.

ಭಾಮಿನಿ ಷಟ್ಪದಿ.

ಶ್ರೀಯರಸ ಗಾಂಗೇಯ ನುತ ಕಾಂ
ತೇಯ ವಂದಿತ ಚರಣ ಕಮಲ ದ
ಳಾಯತಾಂಬಕ ರೂಪ ಚಿನ್ಮಯ ದೇವಕೀ ತನಯ ।
ರಾಯ ರಘುಕುಲ ವರ್ಯ ಭೂಸುರ
ಪ್ರೀಯ ಸುರಪುರ ನಿಲಯ ಚನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತಾ । ೧ ।
ದೇವದೇವ ಜಗದ್ಭರಿತ ವಸು
ದೇವ ಸುತ ಜಗದೇಕನಾಥ ರ
ಮಾ ವಿನೋದಿತ ಸಜ್ಜನಾನತ ನಿಖಿಲ ಗುಣ ಭರಿತಾ ।
ಭಾವಜಾರಿ ಪ್ರಿಯ ನಿರಾಮಯ
ರಾವಣಾಂತಕ ರಘು ಕುಲಾನ್ವಯ
ದೇವ ಅಸುರ ವಿರೋಧಿ ರಕ್ಷಿಸು ನಮ್ಮನನವರತಾ । ೨ ।
ಅನುಪಮಿತ ಚಾರಿತ್ರ ಕರುಣಾ
ವನಧಿ ಭಕ್ತ ಕುಟುಂಬಿ ಯೋಗೀ
ಜನ ಹೃದಯ ಪರಿಪೂರ್ಣ ನಿತ್ಯಾನಂದ ನಿಗಮ ನುತಾ ।
ವನಜನಾಭ ಮುಕುಂದ ಮುರ ಮ
ರ್ದನ ಜನಾರ್ದನ ಕೃಜಗತ್ಪಾ
ವನ ಸುರಾರ್ಚಿತ ದೇವ ರಕ್ಷಿಸು ನಮ್ಮನನವರತಾ । ೩ ।

ಕಮಲ ಸಂಭವ ವಿನುತ ವಾಸವ
ನಮಿತ ಮಂಗಳ ಚರಿತ ದುರಿತ
ಕ್ಷಮಿತ ರಾಘವ ವಿಶ್ವ ಪೂಜಿತ ವಿಶ್ವ ವಿಶ್ವಮಯಾ ||
ಅಮಿತ ವಿಕ್ರಮ ಭೀಮ ಸೀತಾ
ರಮಣವಾಸುಕಿಶಯನ ಖಗಪತಿ
ಗಮನ ಕಂಜಜನಯ್ಯ ರಕ್ಷಿಸುನಮ್ಮನನವರತಾ | ೪ |
ಕ್ಷೀರ ವಾರಿಧಿ ಶಯನ ಶಾಂತಾ
ಕಾರ ವಿವಿಧ ವಿಚಾರ ಗೋಪೀ
ಜಾರ ನವನಿತ ಚೋರ ಚಕ್ರಾಧಾರ ಭವ ದೂರಾ |
ಪೂರ ಪಿತ ಗುಣ ಹಾರ ಸರಸಾ
ಕಾರ ರಿಪು ಸಂಹಾರ ತುಂಬುರು
ಸಾರದ ಪ್ರಿಯ ವರದ ರಕ್ಷಿಸು ನಮ್ಮನನವರತಾ | ೫ |
ತಾವರಸದಳ ನಯನಭಾರ್ಗವ
ರಾಮ ಹಲಧರರಾಮ ದಶರಥ
ರಾಮ ಮೇಘಶ್ಯಾಮ ಸದ್ಗುಣಧಾಮ ನಿಸ್ಸೀಮಾ !
ಸಾಮಗಾನ ಪ್ರೀಯ ಕಾಂಚನ
ಧಾಮ ಧರಸುತ್ರಾಮ ವಿರಚಿತ
ಕಾಮ ರವಿಕುಲಸೋಮ ರಕ್ಷಿಸು ನಮ್ಮ ನನವರತಾ | ೬ |
ವೇದ ಗೋಚರ ವೇಣುನಾದ ವಿ
ನೋದ ಮಂದರ ಶೈಲಧರ ಮಧು
ಸೂದನಾಚ್ಯುತ ಕಂಸ ದಾನವರಿಪು ಮಹಾನುಭಾವಾ |
ಯಾದವೇಂದ್ರ ಯಶೋದೆ ನಂದನ
ನಾದ ಬಿಂದು ಕಳಾತಿಶಯ ಪ್ರ
ಹ್ಲಾದ ರಕ್ಷಕ ವರದ ರಕ್ಷಿಸು ನಮ್ಮನನವರತಾ | ೭ |

ಅಕ್ಷಯಾಶ್ರಿತ ಸುಜನ ಜನ ಸಂ
ರಕ್ಷಣಾ ಶ್ರೀ ವತ್ಸ ಕೌಸ್ತುಭ
ಮೋಕ್ಷ ದಾಯಕ ಕುಟಿಲ ದಾನವ ಶಿಕ್ಷ ಕಮಲಾಕ್ಷಾ ।
ಪಕ್ಷಿ ವಾಹನ ದೇವ ಸಂಕುಲ
ಪಕ್ಷ ಜಗದಧ್ಯಕ್ಷ ನರ ನಿಟಿ
ಲಾಕ್ಷ ಸಖ ಸರ್ವೇಶ ರಕ್ಷಿಸು ನಮ್ಮನನವರತಾ । ೮ ।
ಚಿತ್ರಕೂಟ ನಿವಾಸ ವಿಶ್ವಾ
ಮಿತ್ರ ಕ್ರತು ಸಂರಕ್ಷ ಶಶಿ ರವಿ
ನೇತ್ರ ಭವ್ಯ ಚರಿತ್ರ ಸದ್ಗುಣ ಗಾತ್ರ ಸತ್ಪಾತ್ರಾ ।
ಧಾತ್ರಿಜಾಂತಕ ಕಪಟ ನಾಟಕ
ಸೂತ್ರ ಪರಮ ಪವಿತ್ರ ಫಲುಗುಣ
ಮಿತ್ರ ವಾಕ್ಯವಿಚಿತ್ರ ರಕ್ಷಿಸು ನಮ್ಮನನವರತಾ । ೯ ।
ಮಂಗಳಾತ್ಮಕ ದುರಿತ ತಿಮಿರ ಪ
ತಂಗ ಗರುಡ ತುರಂಗ ರಿಪುಮದ
ಭಂಗ ಕೀರ್ತಿ ತರಂಗ ಪುರಹರ ಸಂಗ ನೀಲಾಂಗಾ ।
ಅಂಗದ ಪ್ರಿಯನಂಗ ಪಿತಕಾ
ಳಿಂಗ ಮರ್ದನ ಅಮಿತ ಕರುಣಾಂ
ಪಾಂಗಶ್ರೀ ನರಸಿಂಗ ರಕ್ಷಿಸು ನಮ್ಮನನವರತಾ । ೧೦ ।
ದಾಶರಥಿ ವೈಕುಂಠ ನಗರಾ
ಧೀಶ ತ್ರೈಜಗದೀಶ ಪಾಪವಿ
ನಾಶ ಪರಮವಿಲಾಸ ಹರಿ ಸರ್ವೇಶ ದೇವೇಶಾ ।
ವಾಸುದೇವ ದಿನೇಶ ಶತಸಂ
ಕಾಶ ಯದುಕುಲ ವಂಶ ತಿಲಕಪ
ರಾಶರಾನತ ದೇವ ರಕ್ಷಿಸು ನಮ್ಮನನವರತಾ । ೧೧ ।

ಕುಂದ ಕುಟ್ಮಲ ದಶನ ವದನಾ
ನಂದ ಹರಿ ಸಿತ್ನದಿಂದ ಗಣಿಸದೆ
ನಂದನಂದಿತ ಸಿಂಧು ಬಾಂಧವ ಸುಂದರಾಗ್ರಿಮರಾ |
ಇಂದಿರಾಪತಿ ವಿಜಯ ಸಖ ಅರ
ವಿಂದನಾಭ ಪುರಂದರಾರ್ಚಿತ
ನಂದ ಕಂದ ಮುಕುಂದ ರಕ್ಷಿಸು ನಮ್ಮನನವರತಾ | ೧೨ |
ಕುಂಡಲಾಭರಣ ತ್ರ್ಯಂಬರಾವಣಾ
ಖಂಡನಾಶನ ಮಂಗಳನಾಮ ಪು
ರಾಣ ಪುರುಷೋತ್ತಮ ನಿಪುಣ ಅಖಿಲರಕ್ಷಕ ಮುಕುಂದಾ
ಶ್ರೀ ಮಹೀಪತಿ ಸುಲಲಿತ ಸುದರ್ಶನ
ಪಾಣಿ ಪಾಂಡವ ರಾಜಕಾರ್ಯ ಧು
ರೀಣ ಜಗನಿರ್ಮಾಣ ರಕ್ಷಿಸು ನಮ್ಮನನವರತಾ | ೧೩ |
ನೀಲವರ್ಣ ವಿಶಾಲ ಶುಭಗುಣ
ಶೀಲ ಮುನಿಕುಲ ಪಾಲ ಲಕ್ಷ್ಮೀ
ಲೋಲ ರಿಪುರಿಕುಮಾಲ ಮಸ್ತಕ ಶೂಲ ವನಮಾಲಾ |
ಮೂಲಕಾರಣ ವಿಮಲ ಮೋದವ
ಬಾಲಮಿತ ಗೋಪಾಲ ಅಗಣಿತ
ಲೀಲ ಕೋಮಲ ಕಾಯ ರಕ್ಷಿಸು ನಮ್ಮನನವರತಾ | ೧೪ |
ನಾಗ ನಗರಿ ಧರಿತ್ರಿ ಶೋಭಿತ ವಿ
ಶಾಗ ಪಂಕ್ತಿ ನಿವಹರಿಗ ಗಮನ ಸ
ರಾಗ ಪಾಂಡವ ರಾಜಕಿತ ಸಂಗ್ರಾಮ ನಿಷ್ಣಾತಾ |
ಯೋಗಿಗಮ್ಯ ಜಲಾಬ್ಧಿ ವಿಹಾರ
ನಾಗಗಾರುಡ ಮಂತ್ರವಿಭವ
ಭೋಗಿ ಶಯ್ಯ ವಿಚಿತ್ರ ರಕ್ಷಿಸು ನಮ್ಮನನವರತಾ | ೧೫ |

ಶ್ರೀಮದುಜ್ವಲ ದೇವಸುತ ಶ್ರೀ
ರಾಮ ನಿನ್ನಯ ಚರಣ ಸೇವೆ
ಪ್ರೇಮದಿಂ ಸೊಪ್ಪ್ವಂಗೆ ಬೆರಗಿಯ ಕೊಳ್ವ ಬಿನ್ನಹವಾ |
ಈ ಮಹಿಯೊಳೀ ಪಠಿಸಿ ಸಾತ್ವ
ಕ್ಷೇಮಿಗಳು ನಿನ್ನಮಲ ಪದ ಪರಿ
ಣಾಮ ವಾರ್ತೆಯ ನಟಹಿ ರಕ್ಷಿಸು ನಮ್ಮನನವರತಾ | ೧೬ |
ಈಗಲೀ ಮಯೂರ್ಗದಿಯುಮಿ ಕರ
ಣಾಗತರ ಸೇವೆಂಬೊಳು ಕೊಂಪು
ಯೋಗಿ ಬಾಳುವರೇನು ಧನ್ಯರೊ ಕಾಲ ಮಹಾದೇವಾ |
ಭೋಗ ಭಾಗ್ಯವ ಬಯಸಿ ಮುಕ್ತಿಯ
ನೀಗಿ ನಿಮ್ಮನು ಭಜಿಸಲರಿಯದ
ಯೋಗಿಗಳ ಮೊರೆಯೇನು ರಕ್ಷಿಸು ನಮ್ಮನನವರತಾ | ೧೭ |
ಭಕ್ತಿ ಸಾರದ ಚರಿತೆಯನು ಹರಿ
ಭಕ್ತರಾಲಿಸುವಂತೆ ರಚಿಸುವೆ
ಯುಕ್ತಿಯುಳಿ ಬರದೋದಿದವರಿಷ್ಟಾರ್ಥ ಸಿದ್ಧಿ ಸುದಾ |
ಮುಕ್ತಿಗಿದು ನೆಲೆ ದೋರುವಸುರಾ
ಭಕ್ತರನು ಲಾಲಿಸುದು ನಿಜ ಸುತಿ
ಭಕ್ತಸೊಲಿವಂಬದರಿ ರಕ್ಷಿಸು ನಮ್ಮನನವರತಾ | ೧೮ |
ನಳಿನ ಲೋಚನ ನಿನ್ನ ಮೂರ್ತಿಯು
ಕಳೆ ಬೆಳಗುತಿದೆ ಅಜರಿಯುಮಿ ಮೊ
ತಳದೊಳಚ್ಚರಿಯೊದ ನಾಮಾಮೃತ ಸಮುದ್ರ ಬಲೀ |
ಬಳಸುವರು ಸತ್ಕವಿಗಳವರೆ
ಗ್ಗಳಕೆ ಯೆನಗಿನಿತಿಲ್ಲ ಸನ್ಮತಿ
ಗಳಿಗೆ ಮಂಗಳವಿತ್ತು ರಕ್ಷಿಸು ನಮ್ಮನನವರತಾ | ೧೯ |

ಗಿಳಿಯ ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದು ನುಡಿ
ಗಳನು ಲಾಲಿಸಿ ಕೇಳ್ವ ಪರಿಣಾತರಂತೆ ನೀಯೆನ್ನಾ ।
ತಿದ್ದು ಮತಿಯನು ಯೆನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾಮಾ
ವಳಿಯ ಪಾಗಳಿಕೆ ಇತ್ತು ರಕ್ಷಿಸು ನಂಮನನವರತಾ । ೨೦ ।
ಪೊಗಳಲಳವೇ ನಿನ್ನ ನಾಮದ
ಸುಗುಣ ಸಚ್ಚಾರಿತ್ರ ಕಥನವ
ನಗಶಿರೋಪಮ ಅಮಿತ ವಿಕ್ರಮ ಗಮ್ಯ ನೀನೆಂದೂ ।
ನಿಗಮತತಿ ಕೈವಾರಿಸುತ ಪದ
ಯುಗವ ಕಾಣದೆ ಬಳಲುತಿದೆ ವಾ
ಸುಕಿ ಶಯನ ಸರ್ವೇಶ ರಕ್ಷಿಸು ನಂಮನನವರತಾ । ೨೧ ।
ವೇದ ಶಾಸ್ತ್ರ ಪುರಾಣ ಪುಣ್ಯದ
ಹಾದಿಯನು ನಾನರಿಯೆ ತರ್ಕದ
ವಾದದಲಿ ಗುರು ಹಿರಿಯರರಿಯದ ಮೂಢ ಮತಿ ಯೆನಗೆ ।
ಆದಿ ಮೂರುತಿ ನೀನು ನೆರೆ ಕರು
ಣೋದಯನು ಹೃದಯಾಂಗಣದಿ ಜ್ಞಾ
ನೋದಯವ ನೆನಗಿತ್ತು ರಕ್ಷಿಸು ನಂಮನನವರತಾ । ೨೨ ।
ಹಸಿವರಿತು ತಾಯ್ತನ್ನ ಶಿಶುವಿಗೆ
ಒಸೆದು ಮೊಲೆ ಕೊಡುವಂತೆ ನೀ ಪೋ
ಷಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರೂ ।
ಬಸುರೊಳಗೆ ಬ್ರಹ್ಮಾಂಡ ಕೋಟಿಯ
ಪಸರಿಸಿದ ಪರಮಾತ್ಮ ನೀನೆಂ
ದುಸುರುತಿವೆ ವೇದಗಳು ರಕ್ಷಿಸು ನಂಮನನವರತಾ । ೨೩ ।

ಇಬ್ಬರ್ಣಾಗರು ನಿನಗೆ ಆವರೊಳ
ಗೊಬ್ಬ ಮಗನೀರೇಳು ಲೋಕದ
ಹೆಬ್ಬೆಳಸು ಬೆಳವಂತೆ ಕಾರಣ ಕರ್ತನಾಗಿಹನೂ ।
ಒಬ್ಬ ಮಗನದ ಬರೆದ ಕರ್ಣಿಕ
ನಿಬ್ಬರೀ ಲೋಕ ಪ್ರಸಿದ್ಧರು
ಹಬ್ಬಿಸಿದೆ ಪ್ರಾಣಿಗಳ ರಕ್ಷಿಸು ನಮ್ಮನನವರತಾ । ೨೪ ।
ಸಿರಿಯೆ ಕುಲಸತಿ ಸುತನು ಕಮಲಜ
ಹಿರಿಯ ಸೊಸೆ ಶಾರದೆ ಸಹೋದರಿ
ಗಿರಿಜೆ ಮೈದುನ ಶಂಕರನು ಸುರರೆಲ್ಲ ಕಿಂಕರರೂ ।
ನಿರತ ಮಾಯೆಯು ದಾಸಿ ನಿಜ ಮಂ
ದಿರವಜಾಂಡವು ಜಂಗಮ ಸ್ಥಾ
ವರ ಕುಟುಂಬಿಗ ನೀನು ರಕ್ಷಿಸು ನಂಮನನವರತಾ । ೨೫ ।
ಸಾಗರನ ಮಗಳರಿಯದಂತೆ ಸ
ರಾಗದಲಿ ಸಂಚರಿಸುತಿಹೆ ಉ
ದ್ಯೋಗವೇನು ನಿಮಿತ್ತ ಕಾರಣವಿಲ್ಲ ಲೋಕದಲಿ ।
ಭಾಗವತರಾದವರ ಸಲಹುವ
ನಾಗಿ ಸಂಚರಿಸುವದು ಈ ಭವ
ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತಾ । ೨೬ ।
ಹಸ್ತಿ ವಾಹನನಾದಿಯಾದ ಸ
ಮಸ್ತ ದೇವ ನಿಕಾಯದೊಳಗೆ ವ
ದಸ್ತನಾವನು ನಿನ್ನ ಪೋಲ್ವ ಶರಣಾಗತರಪೊರೆವಾ ।
ಹಸ್ತ ಕಲಿತ ಸುದರ್ಶನದೊಳರಿ
ಮಸ್ತಕವನಿಳುಹುವ ಪರಾಪರ
ವಸ್ತುವಲ್ಲವೆ ನೀನು ರಕ್ಷಿಸು ನಂಮನನವರತಾ । ೨೭ ।

ಹಸೆಯುರಿಗೆ ವರವೀವರೀಶ್ವರು
ಶೆಸೆಯನರಿಯರು ಕೊಟ್ಟ ವರಗಳ
ಕೆಸಿದು ಕೊಡುವ ಸಮರ್ಥರಾರೀ ಜಗಕೆ ನಿನ್ನಂತೇ |
ಸುಗುಣರಿನ್ನಾರುಂಟು ಕದನವ
ಬಗೆದು ನಿನ್ನೊಳು ಜೈಸುವವರೀ
ಜಗದೊಳುಂಟೇ ದೇವ ರಕ್ಷಿಸು ನಮ್ಮನನವರತಾ | ೨೮ |
ಸುಮನಸರ ವೈರದಲಿ ಕೆಲವರು
ಕುಮತಿಗಳು ತಪದಿಂದ ಭರ್ಗನ
ಕಮಲಜನ ಪದಯುಗವ ಮೆಚ್ಚಿಸಿ ವರವ ಪಡೆದಿಹರೂ ||
ಸಮರ ಮುಖದೊಳಗುಪಮೆಯಲಿವಿ
ಕ್ರಮದಿ ವೈರವ ಮಾಡಿದವರಿಗೆ
ಅಮರ ಪದವಿಯನಿತ್ತೆ ರಕ್ಷಿಸು ನಮ್ಮನನವರತಾ | ೨೯ |
ಬಳಿಯ ಬಂಧಿಸಿ ಮೊರೆಇಡುವ ಸತಿ
ಗೊಲಿದು ಅಕ್ಷಯವಿತ್ತು ಕರುಣದಿ
ಮೊಲೆಯ ನುಣಿಸಿದ ಬಾಲಕಿಯ ಪಿಡಿದಸುವನಪಹರಿಸೀ |
ಶಿಲೆಯ ಸತಿಯಳ ಮಾಡಿ ತ್ರಿಪುರದ
ಲಲನೆಯರ ವ್ರತಗೆಡಿಸಿ ಕೂಡಿದ
ಕೆಲಸ ವುತ್ತಮ ವ್ಹಾತು ರಕ್ಷಿಸು ನಮ್ಮನನವರತಾ | ೩೦ |
ಕಳಿಯ ಕಾಯ್ದೂ ಜಲಧಿ ಮಕರಿಯ
ಶಿರವರಿದು ಹಿರಂಣ್ಯಾಕ್ಷಕನ ಸೀಳ್ದಾ
ತರಳನನು ತಲೆ ಗ್ಯಾದು ಶಕಟಾಸುರನ ಹತ ಮಾಡೀ |
ದುರುಳ ಕಂಸನ ಕೊಂದು ಮಗಧನ
ಮುರಿದು ವತ್ಸನ ಹಂಸಡಿಬಿಕರ
ಹರಣವನು ಹಿಂಗಿಸಿದೆ ರಕ್ಷಿಸುನಮ್ಮನನವರತಾ | ೩೧ |

ಶಿಶುತನದ ಸಾಮರ್ಥ್ಯದಲಿ ಕೆಲ
ರಸುರರನು ಸಂಹರಿಸಿ ಚಕ್ರವ
ಬಿಸುಟು ಯೌವನ ಕಾಲದಲಿ ಯೊಪಾಂಡು ಸುತರಿಂದಾ |
ವಸುಮತಿಯ ಭಾರವನಿಳುಹಿ ಸಾ
ಹಸದಿ ಮೆರೆದವನಾಗಿ ನೀ ಮೆ
ಚ್ಚಿಸಿದೆ ತ್ರಿಜಗವನೆಲ್ಲ ರಕ್ಷಿಸು ನಂಮನನವರತಾ | ೩೨ |
ಎಲ್ಲರಲಿ ನೀನಾಗಿ ಸುಮನಸ
ರಲ್ಲಿ ಅತಿಪ್ರೀತನಾಗಿ ಯೊದವ
ರಲ್ಲಿ ಬಾಂಧವನಾಗಿ ದಾನವರಲ್ಲಿ ಹಗೆಯಾಗೀ |
ಕೊಲ್ಲಿಸಿದೆ ಭೀಮಾರ್ಜುನರ ಕೈ
ಯಲ್ಲಿ ಕೌರವ ಕುಲವನೆಲ್ಲವ
ಬಲ್ಲಿದನು ನೀನಹುದು ರಕ್ಷಿಸು ನಂಮನನವರತಾ | ೩೩ |
ನರಗೆ ಸಾರಥಿಯಾಗಿ ರಣದೊಳು
ತುರಗ ನೀರಡಿಸಿದರೆ ವಾರಿಯ
ಸರಸಿಯನು ನಿರ್ಮಿಸಿ ಕಿರೀಟಿಯ ಕೈಯ್ಯ ಸೈಂಧವನ |
ಶಿರವ ಕೆಡಹಿಸಿ ಅವನ ತಂದೆಯ
ಕರತಳಕೆ ನೀಡಿಸಿದೆ ಹರಹರ
ಪರಮ ಸಾಹಸಿ ನೀನು ರಕ್ಷಿಸು ನಂಮನನವರತಾ | ೩೪ |
ಬವರದಲಿ ಖತಿಗೊಂಡು ಗದೆಯೊಳು
ಕವಿದು ನಿನ್ನ ಶ್ರುತಾಯುಧನು ಹಾ
ಕ್ರವಷಳಿಸಿ ಹಾಯ್ದಾಡಿ ತನ್ನಾಯುಧದಿ ತಾ ಮಡಿದಾ |
ವಿವರವೇನೂತಿಳಿಯೆನೀಮಾ
ಯವನು ನೀನೇ ಬಲ್ಲೆ ನಿನ್ನಾ
ಯವನು ಬಲ್ಲವರುಂಟೆ ರಕ್ಷಿಸು ನಂಮನನವರತಾ | ೩೫ |

ಇಳೆಗೆ ಪತಿಯಾದವನು ಯಾದವ
ಕುಳಗೆ ಬಾಂಧವ ನಿನಗೆ ಸೋದರ
ದಳಿಯನಾದಭಿಮನ್ಯುವನು ಕೊಲ್ಲಿಸಿದೆ ಕೊಳುಗುಳದೀ |
ಅಳಲಿನಬುಧಿಯೊಳದ್ದಿ ತಂಗಿಯ
ಬಳಲಿಸಿದೆ ಕುಲ ಗೋತ್ರ ಬಾಂಧವ
ಕುಳಗೆ ಕೀರ್ತಿಯ ಪಡದೆ ರಕ್ಷಿಸು ನಂಮನನವರತಾ | ೩೬
ತಾಯನಗಲಿದ ತನಯ ನೀ ರಾ
ಧೇಯನೊಳಗೆ ರಹಸ್ಯದಲಿ ಕುಲ
ಛಾಯವನು ನೆರೆ ತಿಳುಹಿ ಅರ್ಜುನನಿಂದ ಕೊಲ್ಲಿಸಿದೇ |
ಮಾಯ ಮಂತ್ರದ ಕುಟಿಲ ಗುಣವ
ನ್ಯಾಯವೋ ಸುನ್ಯಾಯವೊ ನಿಂ
ನಾಯವನು ನೀ ಬಲ್ಲೆ ರಕ್ಷಿಸು ನಂಮನನವರತಾ | ೩೭ |
ಕೊಲ್ಲಿ ಬಗೆದವನಾಗಿ ನೀ ಹಗೆ
ಯಲ್ಲಿ ಸಖ್ಯವ ಬೆಳಸಿದು ಹಿತ
ವಲ್ಲ ನಿನ್ನಯ ಗುಣವ ಬಲ್ಲವರಿಲ್ಲ ಯೆಂದು ಕುಲದೀ |
ಗೊಲ್ಲ ನಾರಿಯರೊಳು ಪ್ರವರ್ತಕ
ನಲ್ಲವೇ ಭಾವಿಸಲು ಲೋಕದೊ
ಳೆಲ್ಲರೂ ಸರಿ ನಿನಗೆ ರಕ್ಷಿಸು ನಂಮನನವರತಾ | ೩೮ |
ಮಗನ ಕೊಂದವ ನಾಳುವಂತಾ
ಸುಗುಣೆಯರು ಹದಿನಾರು ಸಾವಿರ
ಸೊಗಸುಗಾತಿಯರವರ ಮೋಹದ ಬಲೆಗೆ ವಿಟನಾಗೀ |
ಬಗೆ ಬಗೆಯ ರತಿ ಕಲೆಗಳಲಿ ಕೂ
ಡುಗುರ ನಾಟಿಸಿ ಮೆರದು ನೀನೀ
ಜಗಕೆ ಪಾವನನಾದೆ ರಕ್ಷಿಸು ನಂಮನನವರತಾ | ೩೯ |

ಯೇನು ಮಾಡಿದಡೇನು ಕರ್ಮವ
ನೀನೊಲಿಯದಿನ್ನಿಲ್ಲ ವಿದಕನು
ಮೊನವುಂಟೇ ಭ್ರಮರ ಕೀಟನ್ಯಾಯದಂದದಲೀ |
ನೀನೊಲಿಯೆ ತೃಣ ಪರ್ವತವು ಪುಸಿ
ಯೇನು ನೀ ಪತಿಕರಿಸೆ ಬಳಿಕಿ
ನ್ನೇನು ಚಿಂತಿಸಲೇಕೆ ರಕ್ಷಿಸು ನಂಮನನವರತಾ | ೪೦ |
ಎಷ್ಟು ಮಾಡಲು ಮುನ್ನು ತಾ ಪಡ
ದಷ್ಟು ಯೆಂಬುದ ಲೋಕದಾಳು ಮತಿ
ಗೆಟ್ಟು ಮಾನವರಾಡುತಿಹರಾ ಮಾತದಂತಿರಲೀ |
ಪಟ್ಟವಾರಿಂದಾಯ್ತು ಧ್ರುವನಿಗೆ
ಕೊಟ್ಟ ವರ ತಪ್ಪಿತೆ ಕುಚೇಲಗೆ
ಇಷ್ಟ ಬಾಂಧವ ನೀನು ರಕ್ಷಿಸು ನಂಮನನವರತಾ | ೪೧ |
ತನ್ನ ದೇಹಾತುರದಅಡವಿಯೊ
ಳನ್ಯರನು ಸಂಹರಿಸುತಿರುತಿರೆ
ನಿನ್ನ ನಾಮದೊಳಧಿಕವೆರಡಕ್ಷರವ ಬಂಣಿಸುತಾ |
ಧನ್ಯನಾದನು ಮುನಿಕುಲದಿ ಸಂ
ಪನ್ನನಾದನು ನೀನೊಲಿದಬಳಿ
ಕಿನ್ನು ಪಾತಕವುಂಟೆ ರಕ್ಷಿಸು ನಂಮನನವರತಾ | ೪೨ |
ನಿನ್ನ ಸತಿಗಳುಪಿದ ದುರಾತ್ಮನ
ಬೆನ್ನಿನಲಿ ಬಂದವನ ಕರುಣದಿ
ಮನ್ನಿಸಿದ ಕಾರಣ ದಯಾಪರ ಮೂರ್ತಿಯೆಂದೆನುತಾ |
ನಿನ್ನ ಭಜಿಸಿದ ಸಾರ್ವಭೌಮರಿ
ಗಿನ್ನು ಇಹ ಪರವುಂಟು ಸದ್ಗುಣ
ರನ್ನ ಸಿರಿ ಸಂಪನ್ನ ರಕ್ಷಿಸು ನಂಮನನವರತಾ | ೪೩ |

ವೀರ ರಾವಣನೊಡನೆ ಹೋರಿದ
ವೀರರಗ್ಗದ ಕಪಿಗಳವರೊಳು
ಮಾರುತನ ಮಗನೇನು ಧನ್ಯನೊ ಬ್ರಹ್ಮ ಪಟ್ಟದಲೀ ।
ಸೇರಿಸಿದೆ ನಿನ್ನಂತೆಕಾಡುವ ಉ
ದಾರಿ ಯೊವನು ತ್ರಿಜಗದೊಳಗಾ
ಕಾರುಣದಿ ನಂಬಿದೆನು ರಕ್ಷಿಸು ನಂಮನನವರತಾ । ೪೪ ।
ಶಿವ ಶಿವಾ ನೀ ಮಾಡಿದುಪಕಾ
ರವನು ಮರೆದವರುಂಟೆ ಪಾಪದಿ
ನವೆದಜಾಮಿಳನೊಲಿದು ಪ್ರಾಣ ವಿಯೋಗ ಕಾಲದಲೀ ।
ಜವನವರ ಕೈಗೊಪ್ಪಿಸದೆಕಾ
ಯ್ವವನು ನೀ ಮಾಧವನು ಮಿಕ್ಕಾ
ದೆವರಿಗುಂಟೇಕರುಣ ರಕ್ಷಿಸು ನಂಮನನವರತಾ । ೪೫ ।
ಹೆತ್ತ ಮಗಳನು ಮದುವೆಯಾದವ
ನುತ್ತಮನುಗುರುಪತ್ನಿಗಳುಪಿದ
ಚಿತ್ತಜನ ಮಾವನು ಕೃತಘ್ನನು ನಿನಗೆ ಮೈದನನೂ ।
ಹೊತ್ತ ತಪ್ಪಿಸಿ ಕಾವುದಲ ಮುನಿ
ಪೋತ್ತಮನ ಮಡದಿಯನು ನೆರದವ
ಗಿತ್ತೆ ಕೈವಲ್ಯವನು ರಕ್ಷಿಸು ನಂಮನನವರತಾ । ೪೬ ।
ಇಲ್ಲಿಹನು ಅಲ್ಲಿಲ್ಲವೆಂಬೀ
ಸೊಲ್ಲು ಸಲ್ಲದು ಹೊರಗೊಳಗೆ ನೀ
ನಲ್ಲದಿಲ್ಲನ್ಯತ್ರವೆಂಬುದನೆಲ್ಲ ಕೇಳಕೆಲರೂ ।
ಬಲ್ಲರಿಳೆಯೊಳು ಭಾಗವತರಾ
ದೆಲ್ಲರಿಗೆ ವಂದಿಸದ ಕುಜನರಿ
ಗಿಲ್ಲ ಸದ್ಗತಿ ನೋಡಿ ರಕ್ಷಿಸು ನಮ್ಮನನವರತಾ । ೪೭ ।

ಸಿರಿಯು ಸಂಪತ್ತಿನಲಿ ನೀ ಮೈ
ಮರೆದು ಮದ ಗರ್ವದಲಿ ದೀನರ
ಕರುಣದಿಂದೀಕ್ಷಿಸದೆ ಕಡೆಗಣ್ಣಿಂದ ನೋಡುವರೇ |
ಹರಹರಾಸಾಧರನು ಪಾಲಿಸಿ
ವರವ ಕೊಡುವ ಉದಾರಿ ಯೆಂಬೀ
ಬಿರಿದ ಬಿಡುವರೆ ತಂದೆ ರಕ್ಷಿಸು ನಮ್ಮನನವರತಾ | ೪೮ |
ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾ ಮಹಿಮ ಕೈವಲ್ಯಪತಿ ನೀನೂ |
ಯೇನ ಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನನೆ
ಮಾನ ರುಂಟೇದೇವರಕ್ಷಿಸುನಂಮನನವರತಾ | ೪೯ |
ತರಳತನದಲಿ ಕೆಲವು ದಿನ ದುರು
ಭರದ ಗರ್ವದಿ ಕೆಲವು ದಿನ ಮೈ
ಮರೆದು ನಿಮ್ಮಡಿಗೆರಗದಾದೆನು ವಿಷಯ ಕೇಳಿಯಲೀ |
ನರಕ ಭಾಜನನಾಗಿ ಕಾಮಾ
ತುರದಿ ಪರ ಧನ ಪರ ಸತಿಗೆ ಮನ
ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತಾ | ೫೦ |
ಮರೆದೆ ನಭ್ಯುದಯದಲಿ ನಿಮ್ಮನು
ಮರೆಯೆ ನಾಪತ್ತಿನಲಿ ಹರಿಯೆಂ
ದೊರಲುವೆನು ಮನವೇಕ ಭಾವ ದೊಳಿಲ್ಲ ನಿಮ್ಮಡಿಯೊ |
ಮರೆದು ಬಾಹಿರನಾದವನ ನೀ
ಮರವರೇ ಹಸು ತನ್ನ ಕಂದನ
ಮರವುದೇ ಮಮತೆಯಲಿ ರಕ್ಷಿಸು ನಮ್ಮನನವರತಾ | ೫೧ |

ಧಾರುಣಿಗೆ ವರ ಚಕ್ರವರ್ತಿಗ
ಳಾರು ಮಂದಿ ನೃಪಾಲಕರು ಹದಿ
ನಾರು ಮಂದಿಯು ಧರಣಿಯನು ಮುನ್ನಾಳ್ದ ನೃಪರೆನಿತೋ |
ವೀರರನು ಮೆಚ್ಚಿದಳೆ ಧರಣೀ
ನಾರಿ ಬಹು ಮೋಹದೊಳು ನಿನ್ನನು
ಸೇರಿ ಪ್ರೋತ್ಸೈಸುವಳು ರಕ್ಷಿಸು ನಂಮನನವರತಾ | ೫೨ |
ಭಾರಕರ್ತನು ನೀನು ಬಹು ಸಂ
ಸಾರಿಯೆಂಬುದ ನಿಗಮ ತತಿ ಕೈ
ವಾರಿಸುತ್ತಿದೆ ದಿವಿಜ ಮನುಜ ಭುಜಂಗರೊಳಗಿನ್ನೂ |
ಆರಿಗುಂಟು ಸ್ವತಂತ್ರ ನಿನ್ನಂ
ತಾರು ಮುಕ್ತಿಯನೀವ ಸದ್ಗುರು
ವಾರು ಜಗದಧ್ಯಕ್ಷ ರಕ್ಷಿಸು ನಂಮನನವರತಾ | ೫೩ |
ಗತಿವಿಹೀನರಿಗಾರು ನೀನೇ
ಗತಿ ಕಣಾ ಪತಿಕರಿಸಿ ಕೊಡು ಸ
ದ್ಗತಿಯು ನೀನೇ ದೇವ ನಿನಗಪರಾಧಿ ನಾನಲ್ಲಾ |
ಶ್ರುತಿ ವಚನವಾಡುವದು ಶರಣಾ
ಗತರ ಸೇವಕನೆಂದು ನಿನ್ನನು
ಮತವಿಡಿದು ನಂಬಿದೆನು ರಕ್ಷಿಸು ನಂಮನನವರತಾ | ೫೪ |
ಈಗಲೋ ಈ ದೇಹವಿಂನ್ಯಾ
ವಾಗಲೋ ನಿಜವಿಲ್ಲವೆಂಬುದ
ನೀಗಳಿಯದೆ ಮಡದಿ ಮನೆ ಮನೆವಾರ್ತೆ ಯೆಂದೆನುತಾ |
ರಾಗ ಲೋಭದಿಮುಳುಗಿ ಮುಂದಣ
ತಾಗುಬಾಗುಗಳರಿಯೆ ನಿನ್ನ ಸ
ಮಾಗಮವ ಬಯಸುವೆನು ರಕ್ಷಿಸು ನಂಮನನವರತಾ | ೫೫ |

ಮಾಂಸ ರಕ್ತದ ಮಡುವಿನಲಿ ನವ
ಮಾಸ ಜನನಿಯ ಜಠರದೊಳಗಿರು
ವಾಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರೂ |
ನೀ ಸಲಹಿದವನಲ್ಲವೇ ಕರು
ಣಾಸಮುದ್ರನು ನೀನಿರಲು ಕಮ
ಲಾಸನ ಹಂಗೇಕೆ ರಕ್ಷಿಸು ನಂಮನನವರತಾ | ೫೬ |
ಬಲು ಮೃಗವು ಮರ ಪಕ್ಷಿ ಕೀಟಕ
ಜಲಚರೌಘದಿ ಜನಿಸಿದೆನು ಕೋ
ಟಲೆಗೊಳಿಸಬೇಡಕಟ ಮಾನವನಾದ ಬಳಿಕಿನ್ನೂ |
ಕೊಲಿಸದಿರು ಯಮನಿಂದ ಮುರಹರ
ಬಳಿದು ನಿನ್ನನು ಭಜಿಸುವವರಿಗೆ
ಕೊಲೆಗೆ ಕಾರಣವೇನು ರಕ್ಷಿಸು ನಂಮನನವರತಾ | ೫೭ |
ಪಂಚಭೂತದ ಕಾಯದೊಳು ನೀ
ವಂಚಿಸದೆ ಇರುತಿರಲು ಪೂರ್ವದ
ಸಂಚಿತದ ಫಲವೆನ್ನಲೇಕಿದು ಮರಳುತನದಿಂದಾ |
ಮಿಂಚಿದವರಿನ್ನುಂಟೆ ತಿಳಿಯೆ ಪ್ರ
ಪಂಚವೆಲ್ಲಕೆ ತಪ್ಪಿದವನೀ
ಕೊಂಚಗಾರನೆ ಕೃಷ್ಣ ರಕ್ಷಿಸು ನಂಮನನವರತಾ | ೫೮ |
ಹಲವು ಕರ್ಮಗಳಿಂದ ಮೂತ್ರದ
ಬಿಲಗಳಲಿ ಸಂಚರಿಸಿ ಪದವಿಯ
ಫಲವ ಕಾಣದೆ ಹಾಲಿಬು ತಪ್ಪಿದೆನೆನ್ನ ದೇಹದಲೀ |
ಬಳಿದು ನೀನಿರೆ ನಿನ್ನ ಸಲುಗೆಯ
ಬಲುಮೆಯಲಿ ಬರಸೆಳವೆ ಮುಕುತಿಯ
ಲಲನೆಯನು ತಳುವಿಲ್ಲ ರಕ್ಷಿಸು ನಂಮನನವರತಾ | ೫೯ |

ಎತ್ತಿದೆನು ನಾನಾ ಶರೀರವ
ಹೊತ್ತು ಹೊತ್ತಲಸಿದೆನು ಸಲೆ ಬೇ
ಸತ್ತು ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನೂ ।
ಸತ್ತು ಹುಟ್ಟುವ ಹುಟ್ಟಿ ಪೋಗುವ
ಸುತ್ತ ತೊಡಕನು ಮಾಣಿಸೆಲೆ ಪುರು
ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತಾ । ೨೦
ಇಂದು ಈ ಜನ್ಮದಲಿ ನೀನೇ
ಬಂಧು ಪೊಂದಣ ಜನ್ಮದಲಿ ಬಳಿ
ಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲೀ ।
ಎಂದಿಗೂ ತನಗಿಲ್ಲ ತನುಸಂ
ಬಂಧ ನಿನ್ನದು ಯೆನಗೆ ನೀಗತಿ
ಯೆಂದು ಬಿನ್ನೈಸಿದೆನು ರಕ್ಷಿಸು ನಂಮನನವರತಾ । ೨೧ ।
ಗಣನೆ ಯಿಲ್ಲದೆ ಜನನಿಯರು ಪೊಲೆ
ಯುಣಿಸಲಾ ಪಯ ಬಿಂದುಗಳನದ
ನೆಣಿಸಲಳವೆ ಸಮಸ್ತ ಸಾಗರಕಧಿಕವೆನಿಸುವದೂ ।
ಬಣಗು ಕರ್ಮಜನದಕೆ ತಾನೇ
ಪಣಿಯುಗಾನು ಈತ ಪೊಡಿದ
ಕಣಿಕೆಗಳ ನೀ ಬಿಡಿಸಿ ರಕ್ಷಿಸು ನಮ್ಮನನವರತಾ । ೨೨ ।
ಲೇಸ ಕಾಣೆನು ಜನನ ಮರಣದಿ
ಗಾಸಿ ಯಾದೆನು ನೊಂದೆನಕಟಾ
ಕೇಸೆನಿಸಿ ನೋಡಲು ಪರಾಪರ ವಸ್ತು ನೀನಾಗೀ ।
ನೀಸಲಾದವನಲ್ಲ ಲೇ ಕರು
ಣಾ ಸಮುದ್ರನು ನೀನಿರಲು ಕಮ
ಲಾಸನನ ಹಂಗೇನು ರಕ್ಷಿಸು ನಮ್ಮನನವರತಾ । ೨೩ ।

ಕಾಪುರುಷರ್ಕೈಡಾರು ಪೊಂದಿ ಸ
ವಿಷಪದಲಿ ಕಾಡುವರು ಯನ್ನನು
ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲಾ |
ಶ್ರೀ ಪದಾಬ್ಜದ ಸೇವೆಯ ಮಿಸೆರೆ
ಪಾಪವನು ಪರಿಹರಿಸಿ ನೀನಿಜ
ರೂಪಿನಲಿ ಬಂದೊಲಿದು ರಕ್ಷಿಸು ನಂಮನನವರತಾ | ೬೪ |
ಐದು ತತ್ವಗಳಾದ ವೊಂದ
ಕ್ಕೈದು ಕಡೆಯಲಿ ತತ್ವ ವಿಪ್ಪ
ತ್ತೈದು ಕೂಡಿದ ತನುವಿನಲಿ ವಂಚಿಸದೆ ನೀನಿರಲು |
ಛೇದಿಸದೆ ಜೀವಾತ್ಮ ತಾಸಂ
ಪಾದಿಸಿದ ಸಂಚಿತ ಸುಕರ್ಮವ
ನಾದರಿಸಿ ಕೈಕೊಂಡು ರಕಿಸು ನಂಮನನವರತಾ | ೬೫ |
ಎಂಟು ಗೇಣಿನ ದೇಹ ರೋಮಗ
ಳೆಂಟು ಕೋಟಿಯು ಕೀಲ್ಗಳರವ
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು
ನೆಂಟನೀನೀರ್ದಗಲಿದಡೆ ಪ್ರಾಣ
ಹೆಂಟೆಯಲಿ ಮುಚ್ಚುವರು ದೇಹದ
ಉಂಟೆ ಫಲ ಪುರುಷಾರ್ಥ ರಕ್ಷಿಸು ನಂಮನನವರತಾ | ೬೬
ಸ್ನಾನಸಂಧ್ಯಾಧ್ಯಾನ ಜಪತಪ
ದಾನಧರ್ಮ ಪರೋಪಕಾರವಿ
ಹೀನ ಜನ್ಮವನುಳಿವನಲ್ಲದೆ ಬೇರೆ ಗತಿಯುಂಟೇ |
ಏನು ಮಾಡಿದಡೇನು ಮುಕ್ತಿ
ಜ್ಞಾನವಿಲ್ಲದಡಿಲ್ಲ ಭಕ್ತಿಗೆ
ನೀನೆ ಕಾರಣನಾಗಿ ರಕ್ಷಿಸು ನಂಮನನವರತಾ | ೬೭ |

ಕೋಪವೆಂಬುದು ತನುವಿನಲಿ ಸೇರಿ
ಪಾಪ ಪಾತಕದಿಂದ ನರಕದ
ಕೂಪದಲಿ ಮುಳುಗುವದು ತಪ್ಪದು ಶಾಸ್ತ್ರಸಿದ್ಧವತೇ |
ಕಾಪು ಮಾಡದೆ ಬಿಡನು ಯಮನು ನಿ
ರಾಪರಾಧಿಯನೋಡಿ ಕೀರ್ತಿ ಕ
ಲಾಪವನು ನೀ ಕಾಯ್ದು ರಕ್ಷಿಸು ನಮ್ಮನನವರತಾ | ೧೮ |
ನಿನ್ನ ಸೂತ್ರದೊಳಾಡುವವು ಚೈ
ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವವು ಊಹೆಗಳೂ |
ಇನ್ನು ನಮಗೆ ಸ್ವತಂತ್ರವೆಲ್ಲಿಯು
ದನ್ಯ ಕರ್ಮ ಸುಕರ್ಮವೆಲ್ಲವು
ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತಾ | ೧೯ |
ಒಡೆಯ ನೀನೆಂದರಿತು ನಾನಿಂ
ಮಡಿಯು ಭಜಿಸದೆ ದುರುಳನಾದೆನು
ಮಡದಿ ಮಕ್ಕಳ ಮೋಹದಲಿ ಮನ ಸಿಲುಕುತಡಿಗಡಿಗೆ |
ಮಡದಿ ಯಾರೀ ಮಕ್ಕಳಾರೀ
ಒಡಲಿಗೊಡೆಯನು ನೀನು ನೀ ಕೈ
ಪಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತಾ | ೨೦ |
ಪಂಟಿಸಿದ ಮದಮುಖರು ಕೆಲ ಕೆಲ
ರುಂಟು ರಿಪುಗಳು ದಪ್ಪಿಸುತ ಬಲು
ಕಂಟಕದಿ ಕಾಡುವರು ಕಾಯ್ದೋ ಕಲುಷ ಸಂಹಾರಾ |
ಬಂಟನಲ್ಲವೆ ನಾನು ದೀನರ
ನೆಂಟನಲ್ಲವೆ ನೀನು ನಿಂನೊಳ
ಗಂಟೆ ಸಿರ್ದಯು ನೋಡಿ ರಕ್ಷಿಸು ನಮ್ಮನನವರತಾ | ೨೧ |

ದಂಡಧರನು ಪಟಳದಿ ಬಿಗಿ ಮುಂ
ಕೊಂಡ ಪೊರೆಯೊಗುವವರ ಕಾಣಿಸು
ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದಾ |
ಖಂಡ ಪರಶುವು ರುದ್ರ ಭೂಮಿಯೊ
ಳಂಡಲೆದು ತಿರುಗುವನು ನೀನು
ದ್ದಂಡ ದೇವರ ದೇವ ರಕ್ಷಿಸು ನಂಮನನವರತಾ | ೭೨ |
ಶಕ್ತಿಯೆಂಬುದು ಮಾಯೆ ಮಾಯಾ
ಶಕ್ತಿಯುದು ತನುವಿನಲಿ ನೀ ನಿಜ
ಮುಕ್ತಿದಾಯಕನಿರಲು ಸುಖದುಃಖಾದಿಗಳಿಗಾರೂ |
ಯುಕ್ತಿಯೊಳಗಿದನರಿತು ಮನದ ವಿ
ರಕ್ತಿಯಲಿ ಭಜಿಸುವಗೆ ಮುಕ್ತಿಗೆ
ಭಕ್ತಿಯೇ ಕಾರಣವು ರಕ್ಷಿಸು ನಂಮನನವರತಾ | ೭೩ |
ಮೂರು ಗುಣ ಮೊಳೆದೋರಿತದರೊಳು
ಮೂರು ಮೂರ್ತಿಗಳಾಗಿ ರಂಜಿಸಿ
ತೋರಿ ಸೃಷ್ಟಿ ಸ್ಥಿತಿ ಲಯಂಗಳ ರಚಿಸಿ ವಿಲಯದಲೀ |
ಮೂರು ರೂಪೊಂದಾಗಿ ಪ್ರಳಯದ
ವಾರಿಯಲಿ ವಟಪತ್ರ ಶಯನದಿ
ಸೇರಿದವ ನೀನೀಗ ರಕ್ಷಿಸು ನಂಮನನವರತಾ | ೭೪ |
ನೀರಮೇಲಣ ಗುಳ್ಳೆಯಂದದಿ
ತೋರಿಯಡಗುವ ದೇಹವೀ ಸಂ
ಸಾರಬಹುಳಾರ್ಣವದೊಳಗೆ ಮುಳುಗಿದೆನು ಪತಿಕರಿಸೀ |
ತೋರಿಸಚಲಾನಂದ ಪದವಿಯ
ಸೇರಿಸ ಕಟಾ ನಿನ್ನ ವೋಲ್ಗಮ
ಗಾರು ಬಾಂಧವರುಂಟು ರಕ್ಷಿಸು ನಂಮನನವರತಾ | ೭೫ |

ಹೊದ್ದಿ ನಿಲುವುದೆ ದರ್ಪಣದವೋ
ಉದ್ಧುರುಳಿ ಬೀಳ್ವಂತೆ ನಿಮಿಷದಿ
ಬಿದ್ದು ಹೋಗುವ ಕಾಯ ನೀತನು ವೆಂಬಪಾತ್ರದಲೀ ।
ಬದ್ಧನಾದೆನು ಮಮತೆಯಲಿ ನೀ
ನಿರ್ಮದಕೆ ಫಲವೇನು ಭಕ್ತಿವಿ
ರುದ್ಧ ವಾಗದ ವೋಲು ರಕ್ಷಿಸು ನಂಮನನವರತಾ । ೭೬ ।
ಕೇಳುವದು ಕಡು ಕಷ್ಟ ಕಷ್ಟದ
ಬಾಳುವೆಯು ಬದುಕೇನು ಸುಡು ಸುಡು
ಗಾಳಿಗೊಡ್ಡಿದ ಸೊಡರು ಈ ಸಂಸಾರದೇಳಿಗೆಯೂ ।
ಬಾಳಬೇಕೆಂಬವಗೆ ನೆರೆನಿಂ
ಮೂಳಿಗವನಿಗೆ ಮಾಡಿ ಭಕ್ತಿಯೊ
ಳಾಳಿ ಬದುಕುವ ದುಚಿತ ರಕ್ಷಿಸು ನಂಮನನವರತಾ । ೭೭ ।
ದೇಹ ಧಾರಕನಾಗಿ ಬಹುವಿಧ
ಮೋಹ ಸೇಳಿಗೆಯಾಗಿ ಮುಕುತಿಗೆ
ಬಾಹಿರನು ತಾನಾಗಿ ವಿಷಯಾದಿಗಳಿಗೊಳಗಾಗೀ ।
ದೇಹವೀ ಸಂಸಾರವೆನ್ನದೆ
ಮೋಹಿಸುವ ಮತಿಗೇಡಿ ಮಾನವ
ಸಾಹಸಿಯೆ ಸಟೆ ಮಾತು ರಕ್ಷಿಸು ನಂಮನನವರತಾ । ೭೮ ।
ಅಳಿವ ಒಡಲನು ನೆಚ್ಚಿ ವಿಷಯಂ
ಗಳಿಗೆ ಕಾತುರನಾಗಿ ಮಿಗೆಕಳ
ವಳಿಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೇ ।
ತಿಳಿದು ಮನದೊಳು ನಿನ್ನ ನಾಮವ
ವಳಿಯು ಜಂಹೆಗೆ ತಂದು ಪಾಪವ
ಕಳೆದು ಬಿಡುವದೆಲೇಸು ರಕ್ಷಿಸು ನಂಮನನವರತಾ । ೭೯ ।

ಪುರುಷ ನೂರಾಯುಷ್ಯವದರೊಳು
ಇರುಳು ಕಳೆದೈವತ್ತು ಮೇಣ್ತ್ರಿವ
ತ್ತರಲಿ ವಾರ್ಧಿಕ ಬಾಲ್ಯ ಕೌಮಾರದಲಿ ಪೋಪವತ್ತು |
ಇರದೆ ಸಾದುದು ಬಳಿಕ ಇಪ್ಪ
ತ್ತೊರುಷವದರೊಳಗಾದುದಂತ:
ಕರಣ ನಿನ್ನೊಳು ತೋರಿ ರಕ್ಷಿಸು ನಮ್ಮನನವರತಾ | ೬೦ |
ಊರು ತನಗೊಂದಿಲ್ಲ ಹೊತ್ತ
ಶರೀರಗಳು ಮಿತಿಯಿಲ್ಲ ತಾ ಸಂ
ಚಾರಿಸದ ನೆಲೆಯಿಲ್ಲ ನುಡಿಯದ ಭಾಷೆ ಮತ್ತಿಲ್ಲಾ |
ಬೇರೆ ಹೊಸತೊಂದಿಲ್ಲ ಉಣ್ಣದ
ಸಾರ ವಸ್ತುಗಳಿಲ್ಲ ತನುಸಂ
ಚಾರವೀ ಬಗೆಯಾಯ್ತು ರಕ್ಷಿಸು ನಂಮನನವರತಾ | ೬೧
ಗೋಪುರದ ಭಾವನು ಗಾರೆಯ
ರೂಪುದೋರಿದ ಪ್ರತಿಮೆಯಂದದಿ
ಈ ಪರಿಯ ಸಂಸಾರ ಭಾರವನಾಂತು ತಾಳುವರೂ |
ತಾಪರಾಕ್ರಮಿಯೆಂದು ಮನುಜನು
ಶಾಪಥವ ಸೈದುವನ ವಿಶ್ವ
ವ್ಯಾಪಕನು ನೀನಹುದು ರಕ್ಷಿಸು ನಂಮನನವರತಾ | ೬೨
ಬೀಜ ವೃಕ್ಷದೊಳಾಯ್ತು ವೃಕ್ಷಕೆ
ಬೀಜ ವಾರಿಂದಾಯ್ತು ಲೋಕದಿ
ಬೀಜ ವೃಕ್ಷ ನ್ಯಾಯವಿದ ಛೇದಿಸುವರಾರಿನ್ನೂ |
ಯೋಜಿಗವ ನೀ ಬಲ್ಲೆ ನಿಂನೊಳು
ರಾಜಿಸುತ ಮೊಳೆದೋರುವದು ಸುರ
ರಾಜ ನಂದನ ನಮಿತ ರಕ್ಷಿಸು ನಂಮನನವರತಾ | ೬೩ |

ತೆಗಲು ಹೊಂಬೆಗಳಂತೆ ನಾಲುಕು
ಬಗೆಯು ನಿರ್ಮಾಣದಲಿ ಇದರೊಳು
ನೆಗಳದೀ ಚೌಪಪ್ಟಿ ಲಕ್ಷಣ ಜಾತಿ ಧರ್ಮದಲೀ |
ಬಗೆ ಬಗೆಯ ನಾಮಾಂಕಿತದ ಜೀ
ವಿಗಳದೆಲ್ಲವು ನಿನ್ನ ನಾಮದಿ
ಜಗಕೆ ತೋರುತ್ತಿಹುದು ರಕ್ಷಿಸು ನಂಮನನವರತಾ | ೭೪
ಹೂಡಿಸಲು ಮರಮುಟ್ಟು ಮೂಂಸದ
ಗೋಡೆ ಚರ್ಮದ ಹೊದಿಕೆ ನರವಿನ
ಕೂಡೆ ಬೊಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು |
ಬೀಡುತೊಗಲಿದ ಬಿಳ್ಳಿಕ ಲಾಸುಡು
ಗಾಡಿನಲಿ ಬೆಂದಿರುವ ಕೊಂಪೆಯು
ನೋಡಿ ನಂಬಿರ ಬಹುದೆ ರಕ್ಷಿಸು ನಂಮನನವರತಾ | ೭೫ |
ಬೀಗ ಮುದ್ರೆಗಳಿಲ್ಲದೂರಿಗೆ
ಬಾಗಿಲುಗಳೊಂಬತ್ತು ಹಗಲಿರು
ಳಾಗಿ ಮುಚ್ಚದೆ ತೆರದಿಹುದು ಜೀವಾತ್ಮ ತಾನಿರುತಾ |
ನೀಗಿಯಲ್ಲವ ಬಿಸುಟು ಬೇಗದಿ
ಹೋಗುತಿಹ ಸಮಯದಲಿ ಇವರವ
ರಾಗಬಲ್ಲರೆ ನೀನೆ ರಕ್ಷಿಸು ನಮ್ಮನನವರತಾ | ೭೬ |
ಕೀಲು ಬಲಿದಿಹವೈದು ತಿರುಗುವ
ಗಾಲಿ ಯೆರಡರ ರಥದಿ ಯೊಗುಣ
ಶೀಲನೊರ್ವನು ಸಂಚರಿಸುತಿಹನಾರಥಾಗ್ರದಲೀ |
ಕೀಲುಕಡೆಗೊಂದೂಡಿ ಬೀಳಲು
ಕಾಲಗತಿ ತಪ್ಪುವದು ಅದರನು
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತಾ | ೭೭ |

ಬಿಗಿದರಕುತದ ರೋಮ ಕೂಪದ
ತೊಗಲ ಕೋಟೆಯ ನಂಜಿ ರೋಗಾ
ದಿಗಳ ಮುಕ್ತಿಗೆ ಬಲಿದು ಜೀವನ ಪಿಡಿಯಲಿನು ವಾಯು |
ವಿಗಡ ಯಮನಾಳುಗಳು ಬರುತಿರೆ
ತೆಗೆಸು ಕಾಲನ ಬಲಿವ ಬಲೆ ಮು
ತ್ತಿಗೆಯ ನಿದಪರಿಹರಿಸಿ ರಕ್ಷಿಸು ನಂಮನನವರತಾ | ೮೮ |
ವಾರ್ಣಗಳೆಂಟೆಸೆವ ನಗರಕೆ
ದ್ವಾರ ವೊಂಬತ್ತದಕೆ ಬಲು ಮೊನೆ
ಗಾರರಾದಾಳುಗಳ ಕಾವಲುಗಾರರನು ಮಾಡೀ |
ಆರರಿಯದಂತದರೊಳಗೆ ಹೃದ
ಯಾರವಿಂದದಿ ನೀನಿರಲು ಬರಿ
ದೂರು ಜೀವನಿಗುಂಟೆ ರಕ್ಷಿಸು ನಂಮನನವರತಾ | ೮೯ |
ಪೇಳಲೆಂನಳವಲ್ಲ ವೀಗೆಮ
ನಾಳುಗಳು ನೆರೆಯಂಗದೇಶವ
ಘಾಳಿ ಮೊಡುವರಕಟಕಟ ನೆರೆ ಸೂರೆಗಳ ಪಿಡಿದೂ |
ಕಾಳುಮಾಡುವರಿನ್ನು ತನುವಿದು
ಬಾಳಲರಿಯದು ಕೋಟೆಯವರಿಗೆ
ಕೋಳು ಹೋಗದ ಮುನ್ನ ರಕ್ಷಿಸು ನಂಮನನವರತಾ | ೯೦ |
ವಾಲಿಗೆಯು ನಾಸಿಕವು ನಯನ ಕ
ಪಾಲ ಪದ ಪಾಣಿಗಳು ತನುವಿನ
ಮೂಲಿಗರ್ತವಿನಲ್ಲಿ ಪರಿಚಾರಕರು ತಾನಾಗೀ |
ಲೀಲೆಯಿಂದಿರುತಿರ್ದು ಕಡೆಯಲಿ
ಕಾಲಕೀಳಿದ ಬಳಿಕ ಅದರನು
ಕೂಲ ನಿನ್ನೊಳಗಹುದು ರಕ್ಷಿಸು ನಂಮನನವರತಾ | ೯೧ |

ಸತ್ತವರಿಗಳತೇಕೆ ತನ್ನನು
ಹೊತ್ತವರು ಹೆತ್ತವರುಗಳು ಆ
ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು |
ಮೃತ್ಯು ಬೆನ್ನಿನೊಳಿಹುದು ತಾವಿಂ
ನತ್ತು ಮಾಡುವದೇನು ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಂಮನನವರತಾ | ೬೨ |
ಮಣ್ಣು ಮಣ್ಣಿನೊಳುದಿಸಲದರಲಿ
ವಣ್ಣ ಬೊಂಬೆಗಳಾಗಿ ರಂಜಿಸಿ
ಮಣ್ಣಿನಾಹಾರದಲಿ ಜೀವವ ಹೊರದು ಉಪಚರಿಸೀ |
ಮಣ್ಣಿನಲಿ ಬಂಧಿಸಿದ ದೇಹವ
ಮಣ್ಣ ಕೂಡಿಸ ಬೇಡ ಜ್ಞಾನದ
ಕಣ್ಣಿ ದೃಷ್ಟಿಯನಿತ್ತು ರಕ್ಷಿಸು ನಂಮನನವರತಾ | ೬೩ |
ಬೀಯವಾಗುವ ತನುವಿನಲಿ ನಿ
ರ್ದಾಯಕನು ನೀನಿರ್ದು ಅತಿ ಘೋರ
ದಾಯಸಂ ಬಡಿಸುವರೆ ನೀನನುಕೂಲವಾಗಿದ್ದೂ |
ತಾಯನಗಲಿದ ಶಿಶುವಿನಂದದಿ
ಬಾಯ ಬಿಡುವಂತಾಯ್ತೆಲೇ ಚಿಂ
ತಾಯಕನೆ ಬಿಡಬೇಡ ರಕ್ಷಿಸು ನಂಮನನವರತಾ | ೬೪ |
ಮೊದಲು ಜನನವನರಿಯೆ ಮರಣದ
ಹದನ ಕಡೆಯಲಿತಿಳಿಯೆ ನಾವು
ಧ್ಯದಲಿ ನೆರೆ ನಾ ನಿಪುಣನೆಂಬುದು ಬಳಿಕನಗೆ ಗೇಡೂ |
ಮೊದಲು ಕಡೆ ಮಧ್ಯಗಳ ಬಲ್ಲವ
ಮದನ ಜನಕನು ನೀನು ನಿನ್ನಯ
ಪದ ಯುಗವ ಬಯಸುವೆನು ರಕ್ಷಿಸು ನಂಮನನವರತಾ ೬೫

ಸಾರವಿಲ್ಲದ ದೇಹವಿದು ನಿ
ಸ್ಸಾರ ವಾಗಿಹ ತನುವಿನಲಿ ಸು
ಚಾರಿಯುಹ ನೀನಿರ್ದು ಕಡೆಯಲಿ ತೊಲಗಿ ಹೋಗುತಲೀ |
ಪೂರ ತಪ್ಪಿಸಿಕೊಂಡು ಬರಿಯಪ
ದೂರ ಹೊರಿಸಿದೆ ಜೀವನಲಿಯಿದ
ನಾರುಮೆಚ್ಚುವರಕಟ ರಕ್ಷಿಸು ನಂಮನನವರತಾ | ೧೬ |
ಅಂಡವೆರಡುದ್ಭವಿಸಿದವು ಬ್ರ
ಹ್ಮಾಂಡವದರೊಳಾದಿಯಲಿ ಪಿಂ
ಡಾಂಡ ವೆಸಿದುದುಸ್ಥೂಲ ಕಾರಣ ಸೂಕ್ಷ್ಮ ತನುವಿನಲೀ |
ಅಂಡ ಪಿನ್ನಯು ರೋಮ ಕೂಪದೊ
ಳಂಡಲೆದ ವಖಿಲಾಂಡವಿದು ಬ್ರ
ಹ್ಮಾಂಡ ನಾಯಕ ನೀನು ರಕ್ಷಿಸು ನಂಮನನವರತಾ | ೧೭ |
ಒಂದು ದಿನ ತನುವಿನಲಿ ನಡೆವವು
ಇಂದು ಭಾಸ್ಕರ ಸ್ವರಗಳಿಪ್ಪ
ತ್ತೊಂದು ಸಾವಿರ ದಾರನೂರನ್ನು ಮಿಳು ಭಾಗದಲೀ |
ಬಂದುದನು ವೃಷು ಚಕ್ರ ದಲ್ಲಿಗೆ
ತಂದು ಧಾರೆಯು ನೆರದ ಮುನಿಕುಲ
ವೃಂದ ಹೃದಯನು ನೀನು ರಕ್ಷಿಸು ನಂಮನನವರತಾ | ೧೮
ತೊಲಗುವರು ಕಡೆಕಡೆಗೆ ತಾಹೊಲೆ
ಹೊಲೆಯನುತ ಕಳವಳಿಸಿ ಮೂತ್ರದ
ಬಿಲದೊಳಗೆ ಬಂದಿಹದ ಕಾಣದೆ ಬರಿದೆ ಮನಸೊಂದೂ |
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆಗೀಸವೀ ದೇಹದೊಳು ನೀ
ನೆಲಸಿರಲು ಹೊಲೆಯುಂಟೆ ರಕ್ಷಿಸು ನಂಮನನವರತಾ | ೧೯ |

ಬರಿಯಹಂಕಾರದಲಿ ತತ್ವದ
ಕುರುಹ ಕಾಣದೆ ನಿನ್ನ ದಾಸರ
ಜರೆದುವೇದಪುರಾಣ ಶಾಸ್ತ್ರಗಳೋದಿ ಫಲವೇನೂ ।
ನರರುದುಷ್ಕರ್ಮದಲಿ ಮಾಡಿದ
ದುರಿತವಡಗಲು ನಿನ್ನ ನಾಮ
ಸ್ಮರಣೆ ಯೊಂದೇ ಸಾಕು ರಕ್ಷಿಸು ನಂಮನನವರತಾ ।೧೦೦।
ಎಂಜಲೆಂಜಲು ಎಂಬರಾನುಡಿ
ಎಂಜಲಿಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನ್ನಿಸದೇ ।
ಎಂಜಲೆಲ್ಲಿಯದೆಲ್ಲಿಯಂಬರ
ರೆಂಜಲಲ್ಲದೆ ಜೇನೆ ಜೀವಿಸ
ಲೆಂಜಲುಂಟೇ ದೇವ ರಕ್ಷಿಸು ನಂಮನನವರತಾ । ೧೦೧ ।
ಕೇಳುವದು ಹರಿಕಥೆಯು ಕೇಳಲು
ಹೇಳುವದು ಹರಿಭಕ್ತಿ ಮನದಲಿ
ತಾಳುವದು ಬೀರಿದಾಗಿ ನಿನ್ನಯ ಚರಣ ಸೇವೆಯಲೀ ।
ಉಳಿಗವಮಾಡುವದು ವಿಷಯದ
ಹೂಳುವದು ನಿಜಮುಕ್ತಿ ಕಾಂತೆಯ
ನಾಳುವದು ಕೃಪೆ ಮಾಡಿ ರಕ್ಷಿಸು ನಂಮನನವರತಾ । ೧೦೨
ಈತೆರದೊಳಚ್ಯುತನ ನಾಮವ
ನೂತನದಿ ವಸುಧಾತಳದಿ ವಿ
ಖ್ಯಾತಿಯಲಿ ಬಣ್ಣಿಸಿದ ಕನ್ನಡ ಕುಸುಮಷಟ್ಪದಿಯೊ ।
ನೀತಿ ಕೋವಿದ ರಾಲಿಸುವದತಿ
ಪ್ರೀತಿಯಲಿ ಕೇಳ್ದರಿಗೆ ಅಸುರಾ
ರಾತಿಚನ್ನಿಗರಾಯ ಸುಖಗಳನೀವ ನನವರತಾ । ೧೦೩

ಬಾದರಾಯಣ್ಣ ಪೇಳ್ದ ಭಾರತ
ಕಾದಿಕರ್ತನುದಾರ ಶ್ರೀಪುರ
ದಾವಿ ಕೇಶವ ಮೂರ್ತಿಗಂಕಿತವಾದ ಚರಿತೆಯನೂ ।
ಮೇದಿನಿಯೊಳಿದನಾರು ಹೃದಯದೊ
ಳಾದರಿಸಿ ಕೇಳ್ವರೊ ಮುದದಲಿ
ಆದಿಮೂರುತಿ ಸುರವರಾಧಿಪ ನೋಡಿದು ರಕ್ಷಿಸುವಾ । ೧೦೪
ಕುಲಗಿರಿಗಳನ್ವಯವು ಧಾರುಣಿ
ಜಲಧಿ ಪಾವಕ ಮಾರುತ ಜಲ ನಭ
ಜಲಜಸಖ ಶೀತಾಂಶು ತಾರೆಗಳುಳ್ಳ ಪರಿಯಂತಾ ।
ಚಲನೆಯಿಲ್ಲದ ನಿನ್ನ ಚರಿತೆಯು
ಬಲಿದು ಧರೆಯೊಳಗೊಪ್ಪುವಂದದಿ
ಚಲುವ ಚನ್ನಿಗರಾಯ ರಕ್ಷಿಸು ನಮ್ಮನನವರತಾ । ೧೦೫
ನೂರು ಕನ್ಯಾದಾನವನು ಭಾ
ಗೀರಥೀಸ್ನಾನವನು ಮಿಗೆ ಕೈ
ಯೂರೆಗೊವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದೂ ।
ಊರುಗಳ ನೂರಗ್ರಹಾರವ
ಧಾರೆ ಯೆರದಿತ್ತಂತೆ ಫಲಕೈ
ಸೇರುವದು ಹರಿಭಕ್ತಿಸಾರದ ಕಥೆಯ ಕೇಳ್ದರಿಗೇ ೧೦೬
ಮೇರುಮಂದರ ನಿಭಸುವರ್ಣವ
ವಾರಿ ಮಧ್ಯದೊಳಿರುವ ಅವನಿಯು
ನಾರಿಯರ ಗಾಯತ್ರಿ ಪಶುಗಳ ನಿತ್ತ ಫಲವಹುದೂ ।
ಧಾರುಣಿಯೊಳೀ ಭಕ್ತಿಸಾರವ
ನಾರು ಪಾಡುವರವರಿಗನುದಿನ
ಭಾರುತರಗಳನಿತ್ತು ರಕ್ಷಿಪ ನಾಡಕೇಶವನೂ । ೧೦೭ ।

ಲೋಕದೊಳಗತ್ಯಧಿಕವೆನಿಸುವ
ಕಾಗಿನೆಲೆ ಸಿರಿಯಾದಿಕೇಶವ
ತಾ ಕೃಪೆಯೊಳಗೆ ನುಡಿಸಿದನು ಈ ಭಕ್ತಿಸಾರವನೂ |
ಜೋಕೆಯಲಿ ಬರದೋದಿ ಕೇಳ್ದರ
ನಾಕುಲಿದಿ ಮಾಧವನು ಕರುಣಿಪ
ಶ್ರೀಕಮಲೆ ವಲ್ಲಭನು ಮಿಗೆ ಬಡದಾದಿ ಕೇಶವನೂ | ೧೦೮

ಸಮಾಪ್ತ

ಮಂಗಳೂರು: ಹಿಂದು ಮುದ್ರಾಕ್ಷರಶಾಲೆ—೧೮೭೧.

3.–

BHAKTI SĀRAVU

BEING

A STRING OF HYMNS

BY

KANAKA DĀSA.

---:o:---

ಕನಕದಾಸನ ಭಕ್ತಿಸಾರವು.

ನವೀನಭಾಷೆ

MANGALORE

PRINTED BY K. VENKATARAU AT THE HINDU PRESS.

1871